## ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ

## ದಿನಾಂಕ:27.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

### ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ . ಸಿ.ಆರ್.ಬಿ.ವಕೀಲರಿಂದ:

ಪ್ರಸ್ತುತ ದಾವೆಯನ್ನು ಎರಡು ಆಸ್ತಿಗಳಿಗೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ದಾವಾಸ್ವತ್ತುಗಳಲ್ಲಿ ಮನೆಗಳು ಇರುತ್ತವೆ. ಅದರಲ್ಲಿ ಒಂದು ಆರ್.ಸಿ.ಸಿ. ಮನೆ ಮತ್ತು ಮತ್ತೊಂದು ಶೆಡ್ ಇರುತ್ತದೆ. ದಾವಾಸ್ವತ್ತು ಐಟಂ ನಂ: 2 ರಲ್ಲಿ ಆರ್.ಸಿ.ಸಿ.ಮನೆ ಇರುತ್ತದೆ, ಅದರ ವಿಸ್ತೀರ್ಣ 8.3/4 * 10 ಗಜ. ದಾವಾಸ್ವತ್ತು ಐಟಂ ನಂ: 1 ರಲ್ಲಿ 30 *40 ಅಡಿ ಮನೆ ಇರುತ್ತದೆ. ದಾವಾಸ್ವತ್ತು ಐಟಂ ನಂ: 1 ರ ಚಕ್ಕುಬಂದಿ ಪೂರ್ವಕ್ಕೆ- ರಸ್ತೆ , ಪಶ್ಚಿಮಕ್ಕೆ- ಮಹದೇವಯ್ಯ, ಉತ್ತರಕ್ಕೆ- ಶಿವಣ್ಣ , ದಕ್ಷಿಣಕ್ಕೆ- ಈಶಣ್ಣ. ಶಿವಣ್ಣ ರವರಿಗೆ ಸದರಿ ಆಸ್ತಿ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಾವಾಸ್ವತ್ತು ಐಟಂ ನಂ: 2 ರ ಚಕ್ಕುಬಂದಿ ಪೂರ್ವಕ್ಕೆ- ಶಂಕರಪ್ಪರವರ ಅಂಗಡಿ , ಪಶ್ಚಿಮಕ್ಕೆ- ವಿಜಯ ಮತ್ತು ಅವರ ಮಕ್ಕಳ ಮನೆ , ಉತ್ತರಕ್ಕೆ- ರಸ್ತೆ , ದಕ್ಷಿಣಕ್ಕೆ- ನಾಗರಾಜುರವರ ಅಂಗಡಿ.

2. ನನ್ನ ತಂದೆಯ ಹೆಸರು ಲೇ. ದೊಡ್ಡನರಸಪ್ಪ. ಅವರಿಗೆ 4 ಜನ ಮಕ್ಕಳು ಅವರೆಂದರೆ ಶ್ರೀರಾಮಯ್ಯ, ನರಹರಿ, ಚಂದ್ರಶೇಖರಯ್ಯ ಮತ್ತು ನಾನು. ಶ್ರೀರಾಮಯ್ಯರವರು ಮರಣಹೊಂದಿದ್ದು ಪ್ರತಿವಾದಿಗಳು ಅವರ ಮಕ್ಕಳು. ನರಹರಿಯರವರು ಮರಣಹೊಂದಿರುತ್ತಾರೆ. ನನ್ನ ತಂದೆ ಜೀವಂತವಿದ್ದಾಗ ನಮ್ಮ ಒಟ್ಟು ಕುಟುಂಬದ ಆಸ್ತಿಗಳನ್ನು ಅವರು ವ್ಯವಸ್ಥಾ ಪತ್ರದ ಮುಖಾಂತರ ವಿಭಾಗ ಮಾಡಿರುತ್ತಾರೆ ಎಂದರೆ ಸಾಕ್ಷಿ ಸದರಿ ವ್ಯವಸ್ಥಾ ಪತ್ರದಲ್ಲಿ ದಾವಾಸ್ವತ್ತುಗಳನ್ನು ಸೇರಿಸಿರುವುದಿಲ್ಲ ಎನ್ನುತ್ತಾರೆ. ಸದರಿ ವ್ಯವಸ್ಥಾ ಪತ್ರವನ್ನು ಬರೆದ ನಂತರ ನನ್ನ ತಂದೆ ಮತ್ತು ಶ್ರೀರಾಮಯ್ಯರವರು ಸೇರಿ ದಾವಾಸ್ವತ್ತು ಐಟಂ ನಂ: 1 ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ.

3. ಚಂದ್ರಶೇಖರಯ್ಯ ಮರಣಹೊಂದಿರುತ್ತಾರೆ. ಅವರಿಗೆ 3 ಜನ ಹೆಣ್ಣುಮಕ್ಕಳು ಎಂದರೆ ಸರಿ . ಅವರುಗಳು ತುಮಕೂರು , ಬೆಂಗಳೂರು ಮತ್ತು ಸೋಮಲಾಪುರದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ನರಹರಿರವರಿಗೆ ಮಕ್ಕಳಿರುವುದಿಲ್ಲ ಎಂದರೆ ಸರಿ. ವಿಭಾಗದ ನಂತರ ನನ್ನ ತಂದೆ ಶ್ರೀರಾಮಯ್ಯರವರ ಜೊತೆ ವಾಸವಿದ್ದರು ಎಂದರೆ ಸರಿಯಲ್ಲ. ಶ್ರೀರಾಮಯ್ಯರವರು ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಅವರು ನನ್ನ ತಂದೆಯನ್ನು ಮನೆಯಿಂದ ಹೊರಹಾಕಿರುತ್ತಾರೆ ಎನ್ನುತ್ತಾರೆ.

4. ದಾವಾಸ್ವತ್ತು ಐಟಂ ನಂಃ 1 ಕ್ಕೆ ಸಂಬಂದಿಸಿದಂತೆ ಮತ್ತಿಕೆರೆಯ ಸಿದ್ದನಂಜಪ್ಪರವರು ಒಂದು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಓ.ಎಸ್.485/1968 ದಾವೆಯನ್ನು ಅವರು ನನ್ನ ತಂದೆ ಮತ್ತು ಶ್ರೀರಾಮಯ್ಯರವರ ವಿರುದ್ದ ತುಮಕೂರಿನ ಮುನ್ಸಿಫ್ ನ್ಯಾಯಾಲಯದಲ್ಲಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಿದ್ದನಂಜಪ್ಪರವರು ತಮ್ಮ ಹಕ್ಕು ಘೋಷಣೆ ಮತ್ತು ಶಾಶ್ವತ ನಿರ್ಭಂದಕಾಜ್ಞೆ ಕೋರಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದರಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿಯಲ್ಲ.ದಾವಾಸ್ವತ್ತು ಐಟಂ ನಂಃ 1 ರ ಮೇಲೆ ನನಗೆ ಹಕ್ಕು ಅಧಿಕಾರ ಇಲ್ಲದ ಕಾರಣ ಸದರಿ ದಾವೆಯಲ್ಲಿ ನನ್ನನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ಪಕ್ಷಗಾರರು ರಾಜಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದರಂತೆ ಶ್ರೀರಾಮಯ್ಯರವರು ಸಿದ್ದನಂಜಪ್ಪರವರಿಗೆ ರೂ.200/-ಗಳನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ರಾಜಿಯಂತೆ ದಾವಾಸ್ವತ್ತು ಐಟಂ ನಂಃ 1 ಶ್ರೀರಾಮಯ್ಯರವರಿಗೆ ಸೇರಿದ ಆಸ್ತಿ ಎಂದು ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ದಿನಾಂಕದಿಂದ ಶ್ರೀರಾಮಯ್ಯರವರೇ ದಾವಾಸ್ವತ್ತು ಐಟಂ ನಂಃ 1 ರ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

5. ಶ್ರೀರಾಮಯ್ಯರವರ ಮರಣಾನಂತರ ದಾವಾಸ್ವತ್ತು ಐಟಂ ನಂಃ 1 ಅನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡಿದ್ದು ಅದು 3 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಐಟಂ ನಂಃ 1 ಪೂರ್ವಕ್ಕೆ ಈ ಹಿಂದೆ ಸರ್ಕಾರಿ ಜಾಗ ಇದ್ದು ನಂತರ ರಸ್ತೆ ಯಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿನ ಉತ್ತರಕ್ಕೆ ಲಕ್ಷ್ಮೀನರಸಿಂಹಯ್ಯರವರಿಗೆ ಸೇರಿದ ಆಸ್ತಿ ಇದ್ದು ಅದನ್ನು ಶಿವಣ್ಣ ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಐಟಂ ನಂಃ 1 ಒಟ್ಟು ವಿಸ್ತೀರ್ಣ 9* 13 ಗಜ ಎಂದರೆ ಸರಿ . ಅದರ ಉತ್ತರ ಭಾಗದಲ್ಲಿ 3 ನೇ ಪ್ರತಿವಾದಿ ಮನೆಯನ್ನು ನಿರ್ಮಿಸಿ ವಾಸವಿರುತ್ತಾರೆ ಎಂದರೆ ಸಾಕ್ಷಿ 3 ನೇ ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ಮನೆಯನ್ನು ನನ್ನ ತಂದೆ ನಿರ್ಮಿಸಿದ್ದು ಅದರಲ್ಲಿ 3 ನೇ ಪ್ರತಿವಾದಿ ಅಕ್ರಮವಾಗಿ ಸ್ವಾಧೀನದಲ್ಲಿರುತ್ತಾರೆ. ದಾವಾಸ್ವತ್ತು ಐಟಂ ನಂಃ 1 ರ ದಕ್ಷಿಣಕ್ಕಿರುವ ಸ್ವಲ್ಪ ಭಾಗವನ್ನು 3 ನೇ ಪ್ರತಿವಾದಿ ಈಶಣ್ಣರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಈಶಣ್ಣರವರು ಮನೆ ನಿರ್ಮಿಸಿಕೊಂಡು ವಾಸವಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಈಶಣ್ಣರವರ ಮನೆಯ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ . ದಾವಾಸ್ವತ್ತು ಐಟಂ ನಂಃ 1 ರ ಖಾತೆ 3 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ . ದಾವಾಸ್ವತ್ತು ಐಟಂ ನಂಃ 1 ಸಂಪೂರ್ಣವಾಗಿ 3 ನೇ ಪ್ರತಿವಾದಿಗೆ ಸೇರಿದ್ದು ಅದರ ಮೇಲೆ ನನಗೆ ಯಾವುದೇ ಹಕ್ಕುಇರುವುದಿಲ್ಲ ಎಂದರೆ ಸರಿಯಲ್ಲ.

6. ದಾವಾಸ್ವತ್ತು ಐಟಂ ನಂಃ 2 ಈ ಹಿಂದೆ ನನ್ನ ತಂದೆ ದೊಡ್ಡನರಸಪ್ಪರವರಿಗೆ ಸೇರಿದ ಆಸ್ತಿ ಎಂದರೆ ಸರಿ . ಅದರಲ್ಲಿ ಒಂದು ತೆರೆದ ಬಾವಿ ಇತ್ತು ಎಂದರೆ ಸರಿ. ಅದರ ನೀರನ್ನು ಸೋಮಲಾಪುರದ ಗ್ರಾಮಸ್ಥರು ಉಪಯೋಗಿಸುತ್ತಿದ್ದರು ಎಂದರೆ ಸರಿ . ಸದರಿ ಬಾವಿಯನ್ನು ಅದರ ಸುತ್ತಲಿನ ಜಾಗವನ್ನು ಗ್ರಾಮಸ್ಥರು ಉಪಯೋಗಿಸುತ್ತಿದ್ದುದ್ದರಿಂದ ನನ್ನ ತಂದೆ ಅದನ್ನು ಸೋಮಲಾಪುರ ಗ್ರಾಮಪಂಚಾಯಿತಿಗೆ ಕೊಟ್ಟಿದ್ದರುಎಂದರೆ ಸರಿಯಲ್ಲ. ಅದರಂತೆ ಸದರಿ ಆಸ್ತಿಯ ಖಾತೆ ಸೋಮಲಾಪುರ ಗ್ರಾಮಪಂಚಾಯಿತಿಗೆ ವರ್ಗಾವಣೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಬಾವಿ ಒಣಗಿಹೋಯಿತು ಎಂದರೆ ಸರಿ , ಅದಕ್ಕೆ ಗ್ರಾಮಸ್ಥರು ಕಸ ಹಾಕಲು ಆರಂಭಿಸಿದರು ಎಂದರೆ ಸರಿ.

7. ಸದರಿ ಆಸ್ತಿಯ ಪಕ್ಕದಲ್ಲಿ ಶ್ರೀರಾಮಯ್ಯರವರಿಗೆ ಸೇರಿದ್ದ ಮನೆ ಇತ್ತು ಎಂದರೆ ಸರಿ . ಆದ್ದರಿಂದ ಅವರಿಗೆ ಸದರಿ ಕಸದಿಂದ ವಾಸಕ್ಕೆ ತೊಂದರೆಯಾಯಿತು ಎಂದರೆ ಸರಿಯಲ್ಲ. ಆಗ ಶ್ರೀರಾಮಯ್ಯರವರು ಸದರಿ ಗ್ರಾಮಪಂಚಾಯಿತಿಗೆ ಸದರಿ ಬಾವಿಯನ್ನು ಮತ್ತು ಜಾಗವನ್ನು ತಮಗೆ ಕೊಡಲು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದರಂತೆ ಗ್ರಾಮ ಪಂಚಾಯಿತಿಯವರು ದಿಃ 12-09-2002 ರ ನಡವಳಿಯಂತೆ ಸದರಿ ಸ್ವತ್ತನ್ನು ಶ್ರೀರಾಮಯ್ಯರವರಿಗೆ ನೀಡಿದರು ಎಂದರೆ ಸರಿಯಲ್ಲ. ಅದರಂತೆ ಸದರಿ ಸ್ವತ್ತಿನ ಮಾರ್ಕೆಟ್ ದರವನ್ನು ಕಟ್ಟಿದ ನಂತರ ಶ್ರೀರಾಮಯ್ಯರವರಿಗೆ ನೀಡಲು ಪಂಚಾಯಿತಿಯವರು ನಡವಳಿಯಲ್ಲಿ ತೀರ್ಮಾನಿಸಿದರು ಎಂದರೆ ಸರಿಯಲ್ಲ. ಸದರಿ ಹಳೆ ಬಾವಿ ದಾವಾಸ್ವತ್ತು ಐಟಂ ನಂಃ 2 ರಲ್ಲಿ ಇತ್ತು ಎಂದರೆ ಸರಿ . ದಾವಾಸ್ವತ್ತು ಐಟಂ ನಂಃ 2 ರ ಹಳೆಯ ಖಾತೆ ನಂಬರ್ 105/3 ಎಂದರೆ ಸರಿಯಲ್ಲ. ಸದರಿ ಆಸ್ತಿಯ ಅರ್ಧ ಭಾಗವನ್ನು ಪಂಚಾಯಿತಿಗೆ ನೀಡಿದಾಗ ಉಳಿದ ಅರ್ಧ ಭಾಗದ ಖಾತೆ ಶ್ರೀರಾಮಯ್ಯರವರ ಹೆಸರಿನಲ್ಲೇ ಇತ್ತು ಎಂದರೆ ಸರಿಯಲ್ಲ. ಸದರಿ ಉಳಿದ ಅರ್ಧ ಭಾಗದ ಖಾತೆ ನಂಬರ್ 105/2 ಅದರ ವಿಸ್ತೀರ್ಣ 8.75* 10 ಗಜ ಎಂದರೆ ಸರಿಯಲ್ಲ. ಸದರಿ 105/2 ಅನ್ನು ಗ್ರಾಮಪಂಚಾಯಿತಿಯವರು ಶ್ರೀರಾಮಯ್ಯರವರಿಗೆ ಸದರಿ ನಡವಳಿಯ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ನಡವಳಿಯನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ , ತಾಲ್ಲೂಕು ಪಂಚಾಯಿತಿಯವರಿಗೆ ಕಳುಹಿಸಿದ್ದು ಅವರು ದಿಃ 21-02-2004 ರಲ್ಲಿ ಸದರಿ ನಡವಳಿಯ ಮುಖಾಂತರ ಶ್ರೀರಾಮಯ್ಯರವರಿಂದ ಹಣ ಕಟ್ಟಿಸಿಕೊಂಡು ಸದರಿ ಆಸ್ತಿಯನ್ನು ಮಂಜೂರು ಮಾಡುವಂತೆ ಆದೇಶಿಸಿದ್ದರು ಎಂದರೆ ಸರಿಯಲ್ಲ. ಸದರಿ ಆದೇಶದ ನಂತರ ಶ್ರೀರಾಮಯ್ಯರವರು ಸದರಿ ಹಣವನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಇದಾದ ನಂತರ ಪಂಚಾಯಿತಿಯವರು 105/2 ರ ಖಾತೆಯನ್ನು ಶ್ರೀರಾಮಯ್ಯರವರ ಹೆಸರಿಗೆ ವರ್ಗಾಯಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ 105/2 ದಾವಾಸ್ವತ್ತು ಐಟಂ ನಂಃ 2 ಎಂದರೆ ಸರಿಯಲ್ಲ.

8. ಶ್ರೀರಾಮಯ್ಯರವರ ಮರಣದ ನಂತರ ಅವರ ಮಕ್ಕಳ ವಿಭಾಗದಲ್ಲಿ ದಾವಾಸ್ವತ್ತು ಐಟಂ ನಂಃ 2, 1 ನೇ ಪ್ರತಿವಾದಿಯ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ದಾವಾಸ್ವತ್ತು ಐಟಂ ನಂಃ 2 ರ ಖಾತೆಯನ್ನು ತಮ್ಮ ಹೆಸರಿಗೆ ಮಾಡಿಕೊಂಡು ಪಂಚಾಯಿತಿಯಿಂದ ಪರವಾನಗಿ ಪಡೆದು ಅದರಲ್ಲಿ ಮನೆ ನಿರ್ಮಿಸಿರುತ್ತಾರೆ ಎಂದರೆ ಸರಿ . ಅದರಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ .

**ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**